# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 177 |
| ಸದಸ್ಯರ ಹೆಸರು | ಮಾನ್ಯ ಶ್ರೀ ಎಸ್. ನಾಗರಾಜು |
| ಉತ್ತರಿಸುವ ದಿನಾಂಕ: | 11.07.2018 |
| ಉತ್ತರಿಸುವ ಸಚಿವರು: | ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ | ಮಲೆ ಮಹದೇಶ್ವರ ಬೆಟ್ಟದಲ್ಲಿ ಭಕ್ತಾದಿಗಳ ಅನುಕೂಲಕ್ಕಾಗಿ ಎಷ್ಟು ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ. ಈ ಕೊಠಡಿಗಳ ಸಂಪೂರ್ಣ ನಿರ್ಮಾಣ ಕಾರ್ಯ ಯಾವಾಗ ಮುಗಿಯಲಿದೆ; (ನಿರ್ಮಾಣದ ಅಂದಾಜು ವೆಚ್ಚ ಕಾಮಗಾರಿಯ ಹಂತ ಇತ್ಯಾದಿ ವಿವರಗಳನ್ನು ಸಲ್ಲಿಸುವುದು) | ಶ್ರೀ ಮಲೈ ಮಹದೇಶ್ವರಬೆಟ್ಟದಲ್ಲಿ ಭಕ್ತಾದಿಗಳ ಅನುಕೂಲಕ್ಕಾಗಿ ವಿವಿಧ ಕಾಮಗಾರಿಗಳಿಂದ 186 ಸುಸಜ್ಜಿತ ಕೊಠಡಿಗಳು ಹಾಗೂ 24 ಡಾರ್ಮಿಟರಿ ತರಹದ ಕೊಠಡಿಗಳು ಹೀಗೆ ಒಟ್ಟು 210 ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ.<br><br>ವಿವರ ಅನುಬಂಧ-1ರಲ್ಲಿ ಒದಗಿಸಿದೆ. |
| ಆ | ಅಂತರಗಂಗೆ ಕಲ್ಯಾಣಿ ಅಭಿವೃದ್ಧಿ ಕಾಮಗಾರಿ ಯಾವ ಹಂತದಲ್ಲಿದೆ; ಇದಕ್ಕೆ ನಿಗಧಿಪಡಿಸಿರುವ ಅಂದಾಜು ಇದುವರೆಗಿನ ವೆಚ್ಚ, ಕಾಮಗಾರಿಯ ಹಂತದ ವಿವರ ಒದಗಿಸುವುದು; | ಸದರಿ ಕ್ಷೇತ್ರದಲ್ಲಿ ಭಕ್ತಾದಿಗಳ ಸ್ನಾನದ ವ್ಯವಸ್ಥೆಗಾಗಿ ಅಂತರಗಂಗೆ ಕಲ್ಯಾಣಿ ಅಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿದೆ.<br><br>ವಿವರ ಅನುಬಂದ-2ರಲ್ಲಿ ಒದಗಿಸಿದೆ. |
| ಇ | ಮಹದೇಶ್ವರನ ಬೆಟ್ಟದಲ್ಲಿ ಯು.ಜಿ.ಡಿ ಕಾಮಗಾರಿಗಳು ಯಾವ ಹಂತದಲ್ಲಿದೆ; ಈ ಕಾಮಗಾರಿಗೆ ನಿಗಧಿಪಡಿಸಿರುವ ಅಂದಾಜು ವೆಚ್ಚ, ಕಾಮಗಾರಿಯ ಹಂತ ಇತ್ಯಾದಿ ವಿವರ ಒದಗಿಸುವುದು; | ಶ್ರೀ ಮಲೈ ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಯು.ಜಿ.ಡಿ ಕಾಮಗಾರಿಯ ಮೈನ್ ಪೈಪ್ ಲೈನ್ ಮತ್ತು ಮ್ಯಾನ್ ಹೋಲ್ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದೆ.<br><br>ವಿವರ ಅನುಬಂದ-3ರಲ್ಲಿ ಒದಗಿಸಿದೆ. |
| ಈ | ಭಕ್ತಾದಿಗಳು ಕುಳಿತುಕೊಳ್ಳಲು ನಿರ್ಮಿಸಿರುವ ಶೆಡ್‌ನಲ್ಲಿ ಮಳೆ ನೀರು ನಿಲ್ಲುತ್ತಿರುವುದು, ಸುತ್ತಮುತ್ತಲ ಜಾಗದಲ್ಲಿ ಮಳೆ ಬಂದಾಗ ಕೆಸರು ತುಂಬಿ ಓಡಾಡಲು ಆಗದ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ; ಮಳೆ ನೀರು ಸರಾಗವಾಗಿ ಹರಿದು ಹೋಗಲು, ಷೆಡ್ ಒಳಗೆ ನೀರು ನಿಲ್ಲದಿರಲು, ಸುತ್ತಮುತ್ತಲ ಜಾಗದಲ್ಲಿ ನೀರು ನಿಲ್ಲದಂತೆ ಮಾಡಿ ಪರಿಸರ ಸ್ವಚ್ಛವಾಗಿಡಲು ಸೂಕ್ತ ಕ್ರಮ ಜರುಗಿಸಲಾಗುವುದೇ? | ಹೌದು.<br><br>ಸದರಿ ಪ್ರಾಧಿಕಾರಕ್ಕೆ ಸೇರಿದ ಮಾಸ್ಟರ್ ಪ್ಲಾನ್ ಆವರಣದಲ್ಲಿರುವ ರಂಗಮಂದಿರದ ಮುಂಭಾಗ ವಿಶಾಲವಾದ ಆವರಣಕ್ಕೆ ಜಿ.ಐ.ಶೀಟ್ ಮೇಲ್ಛಾವಣಿ ಅಳವಡಿಸುವ ಕಾಮಗಾರಿ ಹಾಗೂ ಭಕ್ತಾದಿಗಳಿಗೆ ಬಿಸಿಲು ಮತ್ತು ಮಳೆಯಿಂದ ರಕ್ಷಣೆ ಸೌಲಭ್ಯ ಕಲ್ಪಿಸುವ ಕಾಮಗಾರಿಯನ್ನು ಕೈಗೊಂಡಿದ್ದು ಸದರಿ ಕಾಮಗಾರಿಯು ಪೂರ್ಣಗೊಂಡಿದೆ.<br>ಮಳೆ ನೀರು ಶೆಡ್‌ನ ಒಳಗಡೆ ಬಾರದಂತೆ ಹಾಗೂ ನೀರು ಸರಾಗವಾಗಿ ಹೊರಗಡೆ ಹೋಗಲು ಕಾಮಗಾರಿ ನಿರ್ವಹಿಸಲು ಲೋಕೋಪಯೋಗಿ ಇಲಾಖೆ ಚಾಮರಾಜನಗರ ರವರಿಂದ ಅಂದಾಜು ಪಟ್ಟಿ ತಯಾರಿಸಿ ಪಡೆದಿದ್ದು ಕಾಮಗಾರಿ ಸಂಬಂಧ ಟೆಂಡರ್ ಪ್ರಕ್ರಿಯೆಯಲ್ಲಿದೆ. |

(ಸಂಖ್ಯೆ:ಕಂಇ 107 ಮುಸಪ್ರ 2018)

(ರಾಜಶೇಖರ ಬಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಹಾಗೂ
ಮುಜರಾಯಿ ಸಚಿವರು

# ಅನುಬಂಧ-1

| ಕ್ರ. ಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಆಡಳಿತಾತ್ಮಕ ಮಂಜೂರಾತಿ ನೀಡಿದ ದಿನಾಂಕ | ಕಾಮಗಾರಿ ಪ್ರಾರಂಭಿಸಿದ ದಿನಾಂಕ: | ಕಾಮಗಾರಿ ಮುಕ್ತಾಯ ಗೊಳಿಸಬೇಕಾದ ದಿನಾಂಕ: | ಈ ವರೆವಿಗೆ ಪಾವತಿಸಿರುವ ಮೊಬಲಗು (ರೂ.ಗಳಲ್ಲಿ) | ಕಾಮಗಾರಿಯ ಪ್ರಗತಿಯ ಹಂತ |
|---|---|---|---|---|---|---|---|
| 1 | ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ 90 ಕೊಠಡಿಗಳಲ್ಲಿ ವಸತಿ ಗೃಹ ನಿರ್ಮಾಣ ಕಾಮಗಾರಿ. | 968.00 | 19-11-2014 | 15-02-2016 | 16 ತಿಂಗಳು 14-07-2017 | 61923265.00 | ಈ ಕಾಮಗಾರಿಯು ಬಹುತೇಕವಾಗಿ ಪೂರ್ಣಗೊಂಡಿರುತ್ತದೆ. ಕಟ್ಟಡದ ಒಳಕೆ ಕಾಮಗಾರಿಗಳಾದ ಬಣ್ಣ ಬಳಿಯುವ ಕಾಮಗಾರಿ ಉಳಿದಿರುತ್ತದೆ. ಅಲ್ಲದೆ ಕಟ್ಟಡದ ತ್ಯಾಜ್ಯವನ್ನು ಹೊರ ಹಾಕಲು ಸೆಪ್ಟಿಕ್ ಟ್ಯಾಂಕ್ ಕೆಲಸ ಹಾಗೂ ಹೊರ ಆವರಣದ ಕೆಲಸ ಪ್ರಗತಿಯಲ್ಲಿದೆ. |
| 2 | ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ 512 ಕೊಠಡಿಗಳಲ್ಲಿ ವಸತಿ ಗೃಹ ನಿರ್ಮಾಣ1ನೇ ಹಂತದ 92 ಕೊಠಡಿಗಳ ನಿರ್ಮಾಣ ಕಾಮಗಾರಿ. | 2390.00 | 19-11-2014 | 08-08-2016 | 24 ತಿಂಗಳು 07-08-2018 | 50139592.00 | ಈ ಕಾಮಗಾರಿಯನ್ನು 4 ವಿಭಾಗಗಳನ್ನಾಗಿ ವಿಂಗಡಿಸಲಾಗಿದ್ದು ಅದರಲ್ಲಿ 3 ಭಾಗಗಳು ತಳಪಾಯದ ಕಾಮಗಾರಿ ಪೂರ್ಣಗೊಂಡಿದ್ದು ಹಾಗೂ ಕಾಂಕ್ರೀಟ್ ಕಂಬಗಳು ಛಾವಣಿಯ ತಳ ಭಾಗದವರೆಗೆ ಪೂರ್ಣಗೊಂಡಿರುತ್ತದೆ. ಉಳಿದ 4ನೇ ಭಾಗವು ತಳಪಾಯದ ಕೆಲಸ ಪ್ರಗತಿಯಲ್ಲಿದೆ. ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಎಚ್ಚರಿಕೆ ನೋಟೀಸ್‌ನ್ನು ನೀಡಲಾಗಿದೆ. |

B S Nagarathnam
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

## ಅನುಬಂಧ-2

| ಕ್ರ. ಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಆಡಳಿತಾತ್ಮಕ ಮಂಜೂರಾತಿ ನೀಡಿದ ದಿನಾಂಕ | ಕಾಮಗಾರಿ ಪ್ರಾರಂಭಿಸಿದ ದಿನಾಂಕ: | ಕಾಮಗಾರಿ ಮುಕ್ತಾಯ ಗೊಳಿಸಬೇಕಾದ ದಿನಾಂಕ: | ಈ ವರೆವಿಗೆ ಪಾವತಿಸಿರುವ ಮೊಬಲಗು (ರೂ.ಗಳಲ್ಲಿ) | ಕಾಮಗಾರಿಯ ಪ್ರಗತಿಯ ಹಂತ |
|---|---|---|---|---|---|---|---|
| 1 | ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಮಾಸ್ಟರ್ ಪ್ಲಾನ್ ಆವರಣದಲ್ಲಿರುವ ಅಂತರಗಂಗೆ ಅಭಿವೃದ್ಧಿಪಡಿಸುವ ಕಾಮಗಾರಿ. | 427.00 | 02-08-2016 | 27-03-2017 | 26-12-2017 | 28432583.00 | ಕಲ್ಯಾಣಿಯ 3 ಕಡೆಯ ಹಂತಗಳ ನಿರ್ಮಾಣವು ಪೂರ್ಣಗೊಂಡಿದ್ದು ಉಳಿದ ಭಾಗದ ಹಂತಗಳು ನಿರ್ಮಾಣದ ಕಾಮಗಾರಿ ಹಾಗೂ ಡಿಸ್ಪ್ಲೇಯಿಂಗ್ ಪೈಪ್ ಲೈನ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ. |

## ಅನುಬಂಧ-3

| ಕ್ರ. ಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಆಡಳಿತಾತ್ಮಕ ಮಂಜೂರಾತಿ ನೀಡಿದ ದಿನಾಂಕ | ಕಾಮಗಾರಿ ಪ್ರಾರಂಭಿಸಿದ ದಿನಾಂಕ: | ಕಾಮಗಾರಿ ಮುಕ್ತಾಯ ಗೊಳಿಸಬೇಕಾದ ದಿನಾಂಕ: | ಈ ವರೆವಿಗೆ ಪಾವತಿಸಿರುವ ಮೊಬಲಗು (ರೂ.ಗಳಲ್ಲಿ) | ಕಾಮಗಾರಿಯ ಪ್ರಗತಿಯ ಹಂತ |
|---|---|---|---|---|---|---|---|
| 1 | ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಮಾಸ್ಟರ್ ಪ್ಲಾನ್ ಆವರಣದಲ್ಲಿ ಒಳಚರಂಡಿ ವ್ಯವಸ್ಥೆ ಯೋಜನೆ ನಿರ್ಮಿಸುವ ಕಾಮಗಾರಿ. | 2710.00 | 21-07-2016 | ಸೆಪ್ಟೆಂಬರ್-2017 | - | 30000000.00 | ಕಾಮಗಾರಿಗೆ 2 ಎಕರೆ ಜಮೀನು ಖರೀದಿಸಲು ಕ್ರಮ ವಹಿಸಲಾಗುತ್ತಿದೆ. ಕಾಮಗಾರಿಯು ಪ್ರಾರಂಭವಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ. |

B S Nagarathnamma

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಮುಜರಾಯಿ)